ಕರ್ನಾಟಕ ಸರ್ಕಾರ

# ಕರ್ನಾಟಕ ಅನುಸೂಚಿತ ಜಾತಿಗಳ ಮತ್ತು ಅನುಸೂಚಿತ ಬುಡಕಟ್ಟುಗಳ (ಕೆಲವು ಭೂಮಿಗಳ ವರ್ಗಾವಣೆಯ ನಿಷೇಧ) ಅಧಿನಿಯಮ, 1978

ಕರ್ನಾಟಕ ಸರ್ಕಾರದ ಮುದ್ರಣ, ಲೇಖನ ಸಾಮಗ್ರಿ ಮತ್ತು ಪ್ರಕಟಣೆಗಳ ಇಲಾಖೆಯ ನಿರ್ದೇಶಕರಿಂದ
ಸರ್ಕಾರಿ ಮುದ್ರಣಾಲಯದಲ್ಲಿ ಮುದ್ರಿಸಲ್ಪಟ್ಟಿದೆ.

# ಕರ್ನಾಟಕ ಅನುಸೂಚಿತ ಜಾತಿಗಳ ಮತ್ತು ಅನುಸೂಚಿತ ಬುಡಕಟ್ಟುಗಳ (ಕೆಲವು ಭೂಮಿಗಳ ವರ್ಗಾವಣೆಯ ನಿಷೇಧ) ಅಧಿನಿಯಮ, 1978

## ಕರ್ನಾಟಕ ಅನುಸೂಚಿತ ಜಾತಿಗಳ ಮತ್ತು ಅನುಸೂಚಿತ ಬುಡಕಟ್ಟುಗಳ (ಕೆಲವು ಭೂಮಿಗಳ ವರ್ಗಾವಣೆಯ ನಿಷೇಧ) ಅಧಿನಿಯಮ, 1978

### ವಿಷಯಾನುಕ್ರಮಣಿಕೆ


| | ಪ್ರಕರಣಗಳು: | ಪುಟಗಳು |
|---|---|---|
| 1. | ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ | 2 |
| 2. | ಸಂವಿಧಾನದ 31ಗ ಅನುಚ್ಛೇದದ ಮೇರೆಗೆ ಘೋಷಣೆ | 2 |
| 3. | ಪರಿಭಾಷೆಗಳು | 3 |
| 4. | ಮಂಜೂರಾದ ಭೂಮಿಗಳ ವರ್ಗಾವಣೆಯ ನಿಷೇಧ | 4 |
| 5. | ಮಂಜೂರಾದ ಭೂಮಿಗಳ ಪುನರ್ವಶ ಮತ್ತು ಪೂರ್ವಸ್ಥಿತಿ ಪ್ರಾಪ್ತಿ | 4 |
| 6. | ಮಂಜೂರಾದ ಭೂಮಿಗಳ ವರ್ಗಾವಣೆಯ ನೋಂದಣಿಗೆ ನಿಷೇಧ | 5 |
| 7. | ವಿನಾಯಿತಿ | 5 |
| 8. | ದಂಡ ಇತ್ಯಾದಿ | 5 |
| 9. | ಸದ್ಭಾವನೆಯಿಂದ ಕೈಕೊಂಡ ಕ್ರಮಕ್ಕೆ ರಕ್ಷಣೆ | 5 |
| 10. | ನಿಯಮ ರಚನಾಧಿಕಾರ | 5 |
| 11. | ಈ ಅಧಿನಿಯಮವು ಇತರ ಕಾನೂನುಗಳನ್ನು ಅಧ್ಯಾರೋಹಿಸತಕ್ಕದ್ದು | 6 |
| 12. | ತೊಂದರೆಗಳನ್ನು ನಿವಾರಿಸುವ ಅಧಿಕಾರ | 6 |

ಕರ್ನಾಟಕ ಸರ್ಕಾರ

## ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವಾಲಯ

## ಅಧಿಸೂಚನೆ

## ನಂ. ಲಾ 59 ಎಲ್.ಎಮ್.ಪಿ. 86, ದಿನಾಂಕ 21 / 24ನೇ ನವೆಂಬರ್ 1986

1963ರ ಕರ್ನಾಟಕ ರಾಜ್ಯಭಾಷಾ ಅಧಿನಿಯಮದ (1963ರ ಕರ್ನಾಟಕ ಅಧಿನಿಯಮ ನಂ. 26ರ) 5–ಎ ಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ ಕರ್ನಾಟಕ ರಾಜ್ಯಪಾಲನಾದ ನಾನು ಶ್ರೀ ಎ.ಎನ್. ಬ್ಯಾನರ್ಜಿ ಕರ್ನಾಟಕ ಅನುಸೂಚಿತ ಜಾತಿಗಳ ಮತ್ತು ಅನುಸೂಚಿತ ಬುಡಕಟ್ಟುಗಳ (ಕೆಲವು ಭೂಮಿಗಳ ವರ್ಗಾವಣೆಯ ನಿಷೇಧ) ಅಧಿನಿಯಮ, 1978 (ಕರ್ನಾಟಕ ಅಧಿನಿಯಮ 1979ರ 2), ಈ ಕೆಳಗಿನ ಕನ್ನಡ ಭಾಷಾಂತರವನ್ನು ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟವಾದ ದಿನಾಂಕದಿಂದ ಪರಿಣಾಮಕಾರಿಯಾಗುವಂತೆ ಕನ್ನಡ ಭಾಷೆಯಲ್ಲಿ ಅದರ ಅಧಿಕೃತ ಪಾಠವಾಗಿರತಕ್ಕದ್ದೆಂದು ಈ ಮೂಲಕ ನಿರ್ದಿಷ್ಟಪಡಿಸುತ್ತೇನೆ.

**ಎ.ಎನ್. ಬ್ಯಾನರ್ಜಿ**
ಕರ್ನಾಟಕದ ರಾಜ್ಯಪಾಲರು
ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

**ಲಿಂಗಯ್ಯ**
ಸರ್ಕಾರದ ಅಧೀನ ಕಾರ್ಯದರ್ಶಿ,
ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಇಲಾಖೆ
(ಆಡಳಿತ–2)

## ಕರ್ನಾಟಕ ಅಧಿನಿಯಮ, 1979–2

**(1979ರ ಜನವರಿ ಒಂದನೇ ದಿನಾಂಕದಂದು ಕರ್ನಾಟಕ ವಿಶೇಷ ರಾಜ್ಯಪತ್ರದಲ್ಲಿ ಮೊದಲು ಪ್ರಕಟಿತವಾಗಿದೆ)**

## ಕರ್ನಾಟಕ ಅನುಸೂಚಿತ ಜಾತಿಗಳ ಮತ್ತು ಅನುಸೂಚಿತ ಬುಡಕಟ್ಟುಗಳ (ಕೆಲವು ಭೂಮಿಗಳ ವರ್ಗಾವಣೆಯ ನಿಷೇಧ) ಅಧಿನಿಯಮ, 1978

**(1978ರ ಡಿಸೆಂಬರ್ ಹದಿನೆಂಟನೇ ದಿನಾಂಕದಂದು ರಾಷ್ಟ್ರಪತಿಯ ಅನುಮತಿಯನ್ನು ಪಡೆದಿದೆ)**

ರಾಜ್ಯದಲ್ಲಿರುವ ಅನುಸೂಚಿತ ಜಾತಿಗಳಿಗೆ ಮತ್ತು ಅನುಸೂಚಿತ ಬುಡಕಟ್ಟುಗಳಿಗೆ ಸೇರಿದ ವ್ಯಕ್ತಿಗಳಿಗೆ ಸರ್ಕಾರವು ಮಂಜೂರು ಮಾಡಿದ ಕೆಲವು ಭೂಮಿಗಳ ವರ್ಗಾವಣೆಯನ್ನು ನಿಷೇಧಿಸುವುದಕ್ಕಾಗಿ ಉಪಬಂಧಿಸುವ ಅಧಿನಿಯಮ.

ರಾಜ್ಯದಲ್ಲಿರುವ ಅನುಸೂಚಿತ ಜಾತಿಗಳಿಗೆ ಮತ್ತು ಅನುಸೂಚಿತ ಬುಡಕಟ್ಟುಗಳಿಗೆ ಸೇರಿದ ವ್ಯಕ್ತಿಗಳಿಗೆ ಸರ್ಕಾರವು ಮಂಜೂರು ಮಾಡಿದ ಭೂಮಿಗಳ ವರ್ಗಾವಣೆಯನ್ನು ನಿಷೇಧಿಸುವುದು ಮತ್ತು ಅವುಗಳನ್ನು ವಾಪಸ್ಸು ಕೊಡಿಸುವುದಕ್ಕಾಗಿ ಉಪಬಂಧಿಸುವುದು ವಿಹಿತವಾಗಿರುವುದರಿಂದ;

ಭಾರತ ಗಣರಾಜ್ಯದ ಇಪ್ಪತ್ತೊಂಬತ್ತನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಕೆಳಕಂಡಂತೆ ಅಧಿನಿಯಮಿತವಾಗತಕ್ಕದ್ದು:–

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.–** (1) ಈ ಅಧಿನಿಯಮವನ್ನು ಕರ್ನಾಟಕ ಅನುಸೂಚಿತ ಜಾತಿಗಳ ಮತ್ತು ಅನುಸೂಚಿತ ಬುಡಕಟ್ಟುಗಳ (ಕೆಲವು ಭೂಮಿಗಳ ವರ್ಗಾವಣೆಯ ನಿಷೇಧ ಅಧಿನಿಯಮ, 1978 ಎಂದು ಕರೆಯತಕ್ಕದ್ದು.

(2) ಇದು ತತ್‌ಕ್ಷಣವೇ ಜಾರಿಗೆ ಬರತಕ್ಕದ್ದು.

**2. ಸಂವಿಧಾನದ 31ಗ ಅನುಚ್ಛೇದದ ಮೇರೆಗೆ ಘೋಷಣೆ.–** ಸಂವಿಧಾನದ 46ನೇ ಅನುಚ್ಛೇದದಲ್ಲಿ ನಮೂದಿಸಲಾಗಿರುವ ತತ್ವಗಳನ್ನು ಸಾಧಿಸುವ ಬಗ್ಗೆ ರಾಜ್ಯದ ಕಾರ್ಯನೀತಿಯನ್ನು ಕಾರ್ಯಗತಗೊಳಿಸುವುದಕ್ಕಾಗಿ ಈ ಅಧಿನಿಯಮದ ಉಪಬಂಧಗಳು ಇವೆಯೆಂದು ಈ ಮೂಲಕ ಘೋಷಿಸಲಾಗಿದೆ.

**3. ಪರಿಭಾಷೆಗಳು.–** (1) ಈ ಅಧಿನಿಯಮದಲ್ಲಿ, ಸಂದರ್ಭಕ್ಕೆ ಬೇರೆ ಅರ್ಥದ ಅಗತ್ಯವಿರದಿದ್ದರೆ.–

(ಕ) **"**ಬ್ಯಾಂಕ್**"** ಎಂದರೆ,–

(i) (ಸಹಕಾರಿ ಬ್ಯಾಂಕನ್ನು ಒಳಗೊಂಡಂತೆ) ಸಹಕಾರಿ ಸಂಘ;

(ii) ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ ಅಧಿನಿಯಮ, 1934ರ ಮೇರೆಗೆ ರಚಿತವಾದ ರಿಸರ್ವ್) ಬ್ಯಾಂಕ್ ಆಫ್ ಇಂಡಿಯಾ;

(iii) ಬ್ಯಾಂಕಿಂಗ್ ವಿನಿಯಮನ ಅಧಿನಿಯಮ, 1949ರಲ್ಲಿ ಪರಿಭಾಷಿಸಿರುವಂತೆ, ಬ್ಯಾಂಕಿಂಗ್ ಕಂಪೆನಿ;

(iv) ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಅಧಿನಿಯಮ, 1955ರ ಮೇರೆಗೆ ರಚಿತವಾದ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ;

(v) ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ (ಸಮನುಷಂಗಿಕ ಬ್ಯಾಂಕುಗಳ) ಅಧಿನಿಯಮದಲ್ಲಿ ಪರಿಭಾಷಿಸಿರುವಂತೆ ಸಮನುಷಂಗಿಕ ಬ್ಯಾಂಕು;

(vi) ಬ್ಯಾಂಕಿಂಗ್ ಕಂಪನಿಗಳ (ಉದ್ಯಮಗಳ ಆರ್ಜನೆ ಮತ್ತು ವರ್ಗಾವಣೆ) ಅಧಿನಿಯಮ, 1970ರ 3ನೇ ಪ್ರಕರಣದ ಮೇರೆಗೆ ರಚಿತವಾದ ಸಂವಾದಿ ಹೊಸ ಬ್ಯಾಂಕ್;

(vii) ಕೃಷಿ ಪುನರ್ವಿತ್ತ ನಿಗಮ ಅಧಿನಿಯಮ, 1963ರ ಮೇರೆಗೆ ರಚಿತವಾದ ಕೃಷಿ ಪುನರ್ವಿತ್ತ ಮತ್ತು ಅಭಿವೃದ್ಧಿ ನಿಗಮ;

(viii) ಕಂಪೆನಿಗಳ ಅಧಿನಿಯಮ, 1956ರ ಮೇರೆಗೆ ನಿಗಮಿತ ಕಂಪೆನಿಯಾಗಿರುವ ಕರ್ನಾಟಕ ರಾಜ್ಯ ಕೃಷಿ ಉದ್ಯಮಗಳ ನಿಗಮ;

(ix) ಕಂಪೆನಿಗಳ ಅಧಿನಿಯಮ 1956ರ ಮೇರೆಗೆ ನಿಗಮಿತ ಕಂಪೆನಿಯಾಗಿರುವ ಕೃಷಿ ವಿತ್ತ ನಿಗಮ, ಪರಿಮಿತ ಮತ್ತು;

(x) ಸರ್ಕಾರದ ಅಥವಾ ಕೇಂದ್ರ ಸರ್ಕಾರದ ಒಡೆತನದಲ್ಲಿರುವ ಅಥವಾ ನಿಯಂತ್ರಣದಲ್ಲಿರುವ ಮತ್ತು ಈ ಅಧಿನಿಯಮದ ಉದ್ದೇಶಕ್ಕಾಗಿ ಬ್ಯಾಂಕು ಎಂದು ಸರ್ಕಾರದಿಂದ ಅಧಿಸೂಚಿತವಾದ ಇತರ ಯಾವುದೇ ವಿತ್ತೀಯ ಸಂಸ್ಥೆ;

(ಖ) "ಮಂಜೂರಾದ ಭೂಮಿ" ಎಂದರೆ ಅನುಸೂಚಿತ ಜಾತಿಗಳಲ್ಲಿ ಮತ್ತು ಅನುಸೂಚಿತ ಬುಡಕಟ್ಟುಗಳಲ್ಲಿ ಯಾವುದಕ್ಕಾದರೂ ಸೇರಿದ ವ್ಯಕ್ತಿಗೆ ಸರ್ಕಾರವು ಮಂಜೂರು ಮಾಡಿದ ಯಾವುದೇ ಭೂಮಿ, ಮತ್ತು ಇದು ಆನುವಂಶಿಕ ಹುದ್ದೆಗಳಿಗೆ ಅಥವಾ ಹಕ್ಕುಗಳಿಗೆ ಸಂಬಂಧಿಸಿದುವುಗಳನ್ನು ಹೊರತುಪಡಿಸಿ ಬೇಸಾಯದ ಸುಧಾರಣೆಗಳಿಗೆ ಅಥವಾ ಭೂ ಪರಿಮಿತಿಗಳಿಗೆ ಅಥವಾ ಇನಾಮುಗಳ ರದ್ದಿಯಾತಿಗೆ ಸಂಬಂಧಿಸಿ ತತ್ಕಾಲದಲ್ಲಿ ಜಾರಿಯಲ್ಲಿರುವ ಸುಸಂಬದ್ಧ ಕಾನೂನಿನ ಮೇರೆಗೆ ಅಂಥ ವ್ಯಕ್ತಿಗೆ ಹಂಚಲಾದ ಅಥವಾ ಮಂಜೂರು ಮಾಡಲಾದ ಭೂಮಿಯನ್ನು ಒಳಗೊಳ್ಳುತ್ತದೆ ಮತ್ತು "ಮಂಜೂರಾದ" ಎಂಬ ಪದವನ್ನು ತದನುಸಾರವಾಗಿ ಅರ್ಥೈಸತಕ್ಕದ್ದು;

(ಗ) "ಸರ್ಕಾರ" ಎಂದರೆ ಕರ್ನಾಟಕ ಸರ್ಕಾರ;

(ಘ) "ಅನುಸೂಚಿತ ಜಾತಿಗಳು" ಮತ್ತು "ಅನುಸೂಚಿತ ಬುಡಕಟ್ಟುಗಳು" ಎಂಬುವುಗಳಿಗೆ ಸಂವಿಧಾನದಲ್ಲಿ ಅವುಗಳಿಗೆ ಅನುಕ್ರಮವಾಗಿ ಕೊಡಲಾದ ಅರ್ಥಗಳೇ ಇರತಕ್ಕದ್ದು;

(ಙ) "ವರ್ಗಾವಣೆ" ಎಂದರೆ, ಮಾರಾಟ, ದಾನ, ವಿನಿಮಯ (ಸ್ವಾಧೀನ ಸಹಿತವಾದ ಅಥವಾ ಸ್ವಾಧೀನ ರಹಿತವಾದ) ಅಡಮಾನ, ಗುತ್ತಿಗೆ, ಅಥವಾ ಕುಟುಂಬದ ಸದಸ್ಯರೊಳಗಿನ ವಿಭಜನೆಯಲ್ಲದ ಇತರ ಯಾವುದೇ ವ್ಯವಹಾರ ಅಥವಾ ಮರಣ ಶಾಸನಿಕ ವಿಲೆ ಮತ್ತು ಋಣಭಾರವನ್ನು ಸೃಷ್ಟಿಸುವುದನ್ನು ಅಥವಾ ಮಾರುವ, ವಿನಿಮಯ ಮಾಡುವ, ಅಡಮಾನ ಮಾಡುವ ಅಥವಾ ಗುತ್ತಿಗೆಗೆ ಕೊಡುವ ಅಥವಾ ಇತರ ಯಾವುದೇ ವ್ಯವಹಾರವನ್ನು ಮಾಡುವ ಬಗೆಗಿನ ಒಪ್ಪಂದವನ್ನು ಒಳಗೊಳ್ಳುತ್ತದೆ.

(2) ಈ ಅಧಿನಿಯಮದಲ್ಲಿ ಪರಿಭಾಷಿಸಿರದ ಪದಗಳಿಗೆ ಮತ್ತು ಪದಾವಳಿಗಳಿಗೆ, ಕರ್ನಾಟಕ ಭೂ ಕಂದಾಯ ಅಧಿನಿಯಮ 1964ರಲ್ಲಿ ಅವುಗಳಿಗೆ ಕೊಟ್ಟಿರುವ ಅರ್ಥವು ಇರತಕ್ಕದ್ದು.

**4. ಮಂಜೂರಾದ ಭೂಮಿಗಳ ವರ್ಗಾವಣೆಯ ನಿಷೇಧ.–** (1) ಯಾವುದೇ ಕಾನೂನಿನಲ್ಲಿ, ಒಪ್ಪಂದದಲ್ಲಿ, ಕರಾರಿನಲ್ಲಿ ಅಥವಾ ಲಿಖಿತ ಪತ್ರದಲ್ಲಿ ಏನೇ ಇದ್ದರೂ, ಮಂಜೂರಾದ ಭೂಮಿಯ ಮಂಜೂರಾತಿಯ ನಿಬಂಧನೆಗಳನ್ನು ಅಥವಾ ಅಂಥ ಮಂಜೂರಾತಿಯ ಬಗ್ಗೆ ಉಪಬಂಧಿಸುವ ಕಾನೂನನ್ನು, ಅಥವಾ (2)ನೇ ಉಪಪ್ರಕರಣವನ್ನು ಉಲ್ಲಂಘಿಸಿ, ಈ ಅಧಿನಿಯಮವು ಪ್ರಾರಂಭವಾಗುವ ಮುಂಚೆಯಾಗಲೀ ಅಥವಾ ಅನಂತರವಾಗಲೀ ಅಂಥ ಭೂಮಿಯನ್ನು ವರ್ಗಾವಣೆ ಮಾಡಿದ್ದು ಅಕೃತವೂ ಮತ್ತು ಶೂನ್ಯವೂ ಆಗತಕ್ಕದ್ದು ಮತ್ತು ಅಂಥ ಭೂಮಿಯಲ್ಲಿರುವ ಯಾವುದೇ ಹಕ್ಕನ್ನು, ಸ್ವಾಮ್ಯವನ್ನು ಅಥವಾ ಹಿತಾಸಕ್ತಿಯನ್ನು

ಅಂಥ ವರ್ಗಾವಣೆಯ ಮೂಲಕ ಹಸ್ತಾಂತರಿಸತಕ್ಕದ್ದಲ್ಲ ಅಥವಾ ಅವು ಎಂದಾದರೂ ಹಸ್ತಾಂತರಿತವಾಗಿದೆಯೆಂದೂ ಭಾವಿಸತಕ್ಕದ್ದಲ್ಲ.

(2) ಈ ಅಧಿನಿಯುಮವು ಪ್ರಾರಂಭವಾದ ಅನಂತರ, ಮಂಜೂರಾದ ಯಾವುದೇ ಭೂಮಿಯನ್ನು ಯಾವ ವ್ಯಕ್ತಿಯೂ, ಸರ್ಕಾರದ ಪೂರ್ವಾನುಮತಿಯಿಲ್ಲದೆ, ವರ್ಗಾಯಿಸತಕ್ಕದ್ದಲ್ಲ ಅಥವಾ ವರ್ಗಾವಣೆಯ ಮೂಲಕ ಆರ್ಜಿಸತಕ್ಕದ್ದಲ್ಲ.

(3) (1)ನೇ ಮತ್ತು (2)ನೇ ಉಪಪ್ರಕರಣಗಳ ಉಪಬಂಧಗಳು ಸಿವಿಲ್ ನ್ಯಾಯಾಲಯ ಡಿಕ್ರಿಯ ಅಥವಾ ಆದೇಶದ ಅಥವಾ ಇತರ ಯಾವುದೇ ಪ್ರಾಧಿಕಾರದ ಯಾವುದೇ ಐತೀರ್ಪಿನ ಅಥವಾ ಆದೇಶದ ಅಮಲ್ಜಾರಿಯಲ್ಲಿ ಮಾಡಲಾಗುವ ಯಾವುದೇ ಭೂಮಿಯ ಮಾರಾಟಕ್ಕೂ ಸಹ ಅನ್ವಯಿಸತಕ್ಕದ್ದು.

**5. ಮಂಜೂರಾದ ಭೂಮಿಗಳ ಪುನರ್ವಶ ಮತ್ತು ಪೂರ್ವಸ್ಥಿತಿ ಪ್ರಾಪ್ತಿ.–** (1) ಹಿತಾಸಕ್ತಿಯುಳ್ಳ ಯಾವನೇ ವ್ಯಕ್ತಿಯು ಕೊಟ್ಟ ಅರ್ಜಿಯ ಅಥವಾ ಯಾವನೇ ವ್ಯಕ್ತಿಯು ಕೊಟ್ಟ ಲಿಖಿತ ಮಾಹಿತಿಯ ಮೇಲೆ ಅಥವಾ ತಾನಾಗಿಯೇ ಮತ್ತು ತಾನು ಅವಶ್ಯವೆಂದು ಭಾವಿಸುವಂತ ವಿಚಾರಣೆಯನ್ನು ಮಾಡಿದ ಅನಂತರ ಮಂಜೂರಾದ ಯಾವುದೇ ಭೂಮಿಯ ವರ್ಗಾವಣೆಯು 4ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಅಕೃತ ಮತ್ತು ಶೂನ್ಯವಾಗಿದೆಯೆಂದು ಅಸಿಸ್ಟೆಂಟ್ ಕಮೀಷನರಿಗೆ ಮನದಟ್ಟಾದಲ್ಲಿ ಅವನು,–

(ಕ) ಭೂಮಿಯ ಸ್ವಾಧೀನತೆಯನ್ನು ಹೊಂದಿರುವ ಎಲ್ಲ ವ್ಯಕ್ತಿಗಳನ್ನು ನಿಯಮಿಸಬಹುದಾದಂಥ ರೀತಿಯಲ್ಲಿ ಹೊರದೂಡಿದ ಅನಂತರ ಅಂಥ ಭೂಮಿಯ ಸ್ವಾಧೀನತೆಯನ್ನು ಆದೇಶದ ಮೂಲಕ ತೆಗೆದುಕೊಳ್ಳಬಹುದು;

ಪರಂತು, ತನ್ನ ಅಹವಾಲನ್ನು ಹೇಳಿಕೊಳ್ಳಲು ಬಾಧಿತ ವ್ಯಕ್ತಿಗೆ ಯುಕ್ತ ಅವಕಾಶವನ್ನು ಕೊಟ್ಟ ಹೊರತು, ಅಂಥ ಯಾವ ಆದೇಶವನ್ನೂ ಮಾಡತಕ್ಕದ್ದಲ್ಲ;

(ಖ) ಮೂಲತಃ ಮಂಜೂರಾತಿ ಪಡೆದವನಿಗೆ ಅಥವಾ ಅವನ ಕಾನೂನು ಸಮ್ಮತ ವಾರಸುದಾರನಿಗೆ ಅಂಥ ಭೂಮಿಯನ್ನು ವಾಪಸ್ಸು ಕೊಡಬಹುದು. ಹಾಗೆ ಮಂಜೂರಾತಿ ಪಡೆದವನಿಗೆ ಅಥವಾ ಕಾನೂನು ಸಮ್ಮತ ವಾರಸುದಾರನಿಗೆ ಭೂಮಿಯನ್ನು ವಾಪಸ್ಸು ಕೊಡುವುದು ಸಂಯುಕ್ತವಾಗಿ ಕಾರ್ಯ ಸಾಧ್ಯವಾಗದಿದ್ದಲ್ಲಿ, ಅಂಥ ಭೂಮಿಯು, ಎಲ್ಲ ಋಣಭಾರಗಳಿಂದ ಮುಕ್ತವಾಗಿ ಸರ್ಕಾರದಲ್ಲಿ ನಿಹಿತವಾಗಿರುವುದಾಗಿ ಭಾವಿಸತಕ್ಕದ್ದು. ಭೂಮಿಯ ಮಂಜೂರಾತಿಗೆ ಸಂಬಂಧಿಸಿದ ನಿಯಮಗಳಿಗನುಸಾರವಾಗಿ ಅನುಸೂಚಿತ ಜಾತಿಗಳಿಗೆ ಅಥವಾ ಅನುಸೂಚಿತ ಬುಡಕಟ್ಟುಗಳಿಗೆ ಸೇರಿದ ಯಾವನೇ ವ್ಯಕ್ತಿಗೆ ಅಂಥ ಭೂಮಿಯನ್ನು ಸರ್ಕಾರವು ಮಂಜೂರು ಮಾಡಬಹುದು.

(2) (1)ನೇ ಉಪಪ್ರಕರಣದ ಮೇರೆಗೆ ಮಾಡಲಾದ ಯಾವುದೇ ಆದೇಶವು ಅಂತಿಮವಾದುದ್ದಾಗಿರತಕ್ಕದ್ದು ಮತ್ತು ಅದನ್ನು ಯಾವುದೇ ಕಾನೂನು ನ್ಯಾಯಾಲಯದಲ್ಲಿ ಪ್ರಶ್ನಿಸತಕ್ಕದ್ದಲ್ಲ ಮತ್ತು ಈ ಅಧಿನಿಯಮದ ಮೂಲಕ ಅಥವಾ ಮೇರೆಗೆ ಪ್ರದತ್ತವಾದ ಯಾವುದೇ ಅಧಿಕಾರಕ್ಕನುಸಾರವಾಗಿ ಅಸಿಸ್ಟೆಂಟ್ ಕಮೀಷನರು ಕೈಗೊಂಡ ಅಥವಾ ಕೈಗೊಳ್ಳಲಿರುವ ಯಾವುದೇ ವ್ಯವಹರಣೆಯ ಸಂಬಂಧವಾಗಿ ಯಾವ ನ್ಯಾಯಾಲಯವೂ ನಿರ್ಬಂಧಕಾಜ್ಞೆಯನ್ನು ಮಾಡತಕ್ಕದ್ದಲ್ಲ.

(3) ಈ ಪ್ರಕರಣದ ಉದ್ದೇಶಗಳಿಗಾಗಿ ಮಂಜೂರಾದ ಯಾವುದೇ ಭೂಮಿಯು ಮೂಲತಃ ಮಂಜೂರಾತಿ ಪಡೆದವನ ಅಥವಾ ಅವನ ಕಾನೂನು ಸಮ್ಮತ ವಾರಸುದಾರನ ಹೊರತು, ಇತರ ವ್ಯಕ್ತಿಯ ಸ್ವಾಧೀನದಲ್ಲಿದ್ದಲ್ಲಿ, 4ನೇ ಪ್ರಕರಣದ (1)ನೇ ಉಪಪ್ರಕರಣದ ಉಪಬಂಧಗಳ ಮೇರೆಗೆ ಅಕೃತ ಮತ್ತು ಶೂನ್ಯವಾಗಿರುವ ವರ್ಗಾವಣೆಯ ಮೂಲಕ ಅಂಥ ವ್ಯಕ್ತಿಯು ಭೂಮಿಯನ್ನು ಆರ್ಜಿಸಿದ್ದಾನೆಂದು ತದ್ವಿರುದ್ಧವಾಗಿ ರುಜುವಾತಾಗುವವರೆಗೆ, ಪೂರ್ವ ಭಾವನೆ ಮಾಡತಕ್ಕದ್ದು.

**6. ಮಂಜೂರಾದ ಭೂಮಿಗಳ ವರ್ಗಾವಣೆಯ ನೋಂದಣಿಗೆ ನಿಷೇಧ.–** ನೋಂದಣಿ ಅಧಿನಿಯಮ 1908ರಲ್ಲಿ ಏನೇ ಇದ್ದರೂ, ಈ ಅಧಿನಿಯಮವು ಪ್ರಾರಂಭವಾದುದು ಅಥವಾ ಅನಂತರ ನೋಂದಣಿ ಅಧಿಕಾರಿಗೆ ಒಪ್ಪಿಸಿದ ಮಂಜೂರಾದ ಭೂಮಿಗಳ ಪಟ್ಟಿಯಲ್ಲಿ ಸೇರಿಸಲಾದ ಯಾವುದೇ ಮಂಜೂರಾದ ಭೂಮಿಯ ವರ್ಗಾವಣೆಗೆ ಅಥವಾ ಅದರಲ್ಲಿ ಯಾವುದೇ ಹಿತಾಸಕ್ತಿಯನ್ನು ಸೃಜಿಸುವುದಕ್ಕೆ ಸಂಬಂಧಿಸಿದ ಯಾವುದೇ ದಸ್ತಾವೇಜನ್ನು, ಅಂಥ ವರ್ಗಾವಣೆಯು ಈ ಅಧಿನಿಯಮಕ್ಕೆ ಅಥವಾ ಅಂಥ ಭೂಮಿಯ ಮಂಜೂರಾತಿಯ ನಿಬಂಧನೆಗಳಿಗೆ ಅಥವಾ ಅಂಥ ಮಂಜೂರಾತಿಗೆ ಅವಕಾಶವನ್ನು ಕಲ್ಪಿಸುವ ಕಾನೂನಿಗೆ ಅನುಸಾರವಾಗಿ ಇದ್ದ ಹೊರತು ಯಾವ ನೋಂದಣಿ ಅಧಿಕಾರಿಯೂ ನೋಂದಣಿಗಾಗಿ ಸ್ವೀಕರಿಸತಕ್ಕದ್ದಲ್ಲ.

**7. ವಿನಾಯಿತಿ.–** ಈ ಅಧಿನಿಯಮದಲ್ಲಿ ಇರುವುದು ಯಾವುದೂ, ಈ ಅಧಿನಿಯಮದ ಪ್ರಾರಂಭಕ್ಕೆ ಮುಂಚೆಯಾಗಲಿ ಅಥವಾ ಆನಂತರವಾಗಲಿ, ಮಂಜೂರಾದ ಭೂಮಿಗಳನ್ನು ಸರ್ಕಾರಕ್ಕೆ, ಕೇಂದ್ರ ಸರ್ಕಾರಕ್ಕೆ ಸ್ಥಳೀಯ ಪ್ರಾಧಿಕಾರಕ್ಕೆ ಅಥವಾ ಬ್ಯಾಂಕಿಗೆ ವರ್ಗಾಯಿಸುವುದಕ್ಕೆ ಅನ್ವಯಿಸತಕ್ಕದ್ದಲ್ಲ.

**8. ದಂಡ ಇತ್ಯಾದಿ.–** (1) ಮಂಜೂರಾದ ಭೂಮಿಯನ್ನು, 4ನೇ ಪ್ರಕರಣದ (2)ನೇ ಉಪಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸಿ ಆರ್ಜಿಸುವ ಯಾವನೇ ವ್ಯಕ್ತಿಯು, ಅಪರಾಧ ನಿರ್ಣಯವಾದ ಮೇಲೆ ಆರು ತಿಂಗಳವರೆಗಿನ ಕಾರಾವಾಸದಿಂದ ಅಥವಾ ಎರಡು ಸಾವಿರ ರೂಪಾಯಿಗಳವರೆಗಿನ ಜುಲ್ಮಾನೆಯಿಂದ ಅಥವಾ ಅವೆರಡರಿಂದ ದಂಡಿತನಾಗತಕ್ಕದ್ದು.

(2) ದಂಡ ಪ್ರಕ್ರಿಯಾ ಸಂಹಿತೆ, 1973ರಲ್ಲಿ ಏನೇ ಇದ್ದರೂ, (1)ನೇ ಉಪಪ್ರಕರಣದ ಮೇರೆಗೆ ದಂಡನೀಯವಾದ ಅಪರಾಧವು ಸಂಜ್ಞೇಯವಾಗಿರತಕ್ಕದ್ದು.

**9. ಸದ್ಭಾವನೆಯಿಂದ ಕೈಗೊಂಡ ಕ್ರಮಕ್ಕೆ ರಕ್ಷಣೆ.–** (1) ಈ ಅಧಿನಿಯಮಕ್ಕೆ ಅಥವಾ ಇದರ ಮೇರೆಗೆ ರಚಿತವಾದ ಯಾವುವೇ ನಿಯಮಗಳಿಗೆ ಅನುಸಾರವಾಗಿ ಸದ್ಭಾವನೆಯಿಂದ ಮಾಡಿದ ಅಥವಾ ಮಾಡಲು ಉದ್ದೇಶಿಸಿದ ಯಾವುದೇ ಕಾರ್ಯದ ಬಗ್ಗೆ ಯಾವನೇ ವ್ಯಕ್ತಿಯ ಅಥವಾ ಅಧಿಕಾರಿಯ ವಿರುದ್ಧ ಯಾವುದೇ ದಾವೆಯನ್ನು, ಪ್ರಾಸಿಕ್ಯೂಷನನ್ನು ಅಥವಾ ಇತರ ಕಾನೂನು ವ್ಯವಹರಣೆಗಳನ್ನು ಹೂಡಲು ಅವಕಾಶವಿರತಕ್ಕದ್ದಲ್ಲ.

(2) ಈ ಅಧಿನಿಯಮದ ಯಾವುದೇ ಉಪಬಂಧದ ಕಾರಣದಿಂದಾಗಿ ಸಂಭವಿಸಿದ ಅಥವಾ ಸಂಭವಿಸಬಹುದಾದ ಯಾವುದೇ ಹಾನಿಯ ಬಗ್ಗೆ ಅಥವಾ ಅನುಭವಿಸಿದ ಅಥವಾ ಅನುಭವಿಸುವ ಸಂಭವವಿರುವ ಯಾವುದೇ ಕ್ಷತಿಯ ಬಗ್ಗೆ ಈ ಅಧಿನಿಯಮದ ಅಥವಾ ಇದರ ಮೇರೆಗೆ ರಚಿಸಲಾದ ಯಾವುವೇ ನಿಯಮಗಳ ಮೇರೆಗೆ ಸದ್ಭಾವನೆಯಿಂದ ಮಾಡಿದ ಅಥವಾ ಮಾಡಲು ಉದ್ದೇಶಿಸಿದ ಯಾವುದೇ ಕಾರ್ಯದ ಬಗ್ಗೆ ಸರ್ಕಾರದ ವಿರುದ್ಧ ಯಾವುದೇ ದಾವೆಯನ್ನು ಅಥವಾ ಇತರ ಕಾನೂನು ವ್ಯವಹರಣೆಗಳನ್ನು ಹೂಡಲು ಅವಕಾಶವಿರತಕ್ಕದ್ದಲ್ಲ.

**10. ನಿಯಮ ರಚನಾಧಿಕಾರ.–** (1) ಈ ಅಧಿನಿಯಮದ ಎಲ್ಲ ಅಥವಾ ಯಾವುದೇ ಉದ್ದೇಶಗಳನ್ನು ಕಾರ್ಯಗತಗೊಳಿಸಲು ಸರ್ಕಾರವು, ಅಧಿಸೂಚನೆ ಮೂಲಕ ನಿಯಮಗಳನ್ನು ರಚಿಸಬಹುದು.

(2) ಈ ಅಧಿನಿಯಮದ ಮೇರೆಗೆ ರಚಿತವಾದ ಪ್ರತಿಯೊಂದು ನಿಯಮವನ್ನು ಅದನ್ನು ರಚಿಸಿದ ಅನಂತರ ಸಾಧ್ಯವಾದಷ್ಟು ಬೇಗನೆ, ರಾಜ್ಯ ವಿಧಾನಮಂಡಲದ ಪ್ರತಿಯೊಂದು ಸದನದ ಮುಂದೆ ಅದು ಅಧಿವೇಶನದಲ್ಲಿರುವಾಗ ಒಂದು ಅಧಿವೇಶನದಲ್ಲಿ ಅಥವಾ ಒಂದಾದ ಮೇಲೊಂದು ಬರುವ ಎರಡು ಅಥವಾ ಹೆಚ್ಚು ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಮೂವತ್ತು ದಿನಗಳ ಅವಧಿಯವರೆಗೆ ಇಡತಕ್ಕದ್ದು ಮತ್ತು ಮೇಲೆ ಹೇಳಿದ ಅಧಿವೇಶನಗಳ ಅಥವಾ ಒಂದಾದ ಮೇಲೊಂದು ಬರುವ ಅಧಿವೇಶನಗಳ ನಿಕಟೋತ್ತರದ ಅಧಿವೇಶನವು ಮುಕ್ತಾಯವಾಗುವ ಮುಂಚೆ ಆ ನಿಯಮದಲ್ಲಿ ಯಾವುದೇ ಮಾರ್ಪಾಟನ್ನು ಮಾಡಬೇಕೆಂದು ಎರಡೂ ಸದನಗಳು ಒಪ್ಪಿದರೆ ಅಥವಾ ಆ ನಿಯಮವನ್ನು ಮಾಡಕೂಡದೆಂದು ಎರಡೂ ಸದನಗಳು ಒಪ್ಪಿದರೆ, ಆ ನಿಯಮದ ಮಾರ್ಪಾಟನ್ನು ಅಥವಾ ಶೂನ್ಯತೆಯನ್ನು ಯಾವ ದಿನಾಂಕದಂದು ಅಧಿಸೂಚಿಸಲಾಗುತ್ತದೆಯೋ

ಆ ದಿನಾಂಕದಿಂದ, ಸಂದರ್ಭಾನುಸಾರ ಹಾಗೆ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗತಕ್ಕದ್ದು. ಅಥವಾ ಶೂನ್ಯವಾಗತಕ್ಕದ್ದು. ಹೀಗಿದ್ದಾಗ್ಯೂ ಅಂಥ ಯಾವುದೇ ಮಾರ್ಪಾಟು ಅಥವಾ ಶೂನ್ಯತೆಯು ಆ ನಿಯಮದ ಮೇರೆಗೆ ಹಿಂದೆ ಮಾಡಿದ ಯಾವುದೇ ಕಾರ್ಯದ ಸಿಂಧುತ್ವಕ್ಕೆ ಬಾಧಕವಾಗತಕ್ಕದ್ದಲ್ಲ.

**11. ಈ ಅಧಿನಿಯಮವು ಇತರ ಕಾನೂನುಗಳನ್ನು ಅಧ್ಯಾರೋಹಿಸತಕ್ಕದ್ದು.–** ಈ ಅಧಿನಿಯಮದ ಉಪಬಂಧಗಳು, ತತ್ಕಾಲದಲ್ಲಿ ಜಾರಿಯಲ್ಲಿರುವ ಇತರ ಯಾವುದೇ ಕಾನೂನಿನಲ್ಲಿ ಅಥವಾ ಯಾವುದೇ ರೂಢಿಯಲ್ಲಿ, ಆಚರಣೆಯಲ್ಲಿ ಅಥವಾ ಕರಾರಿನಲ್ಲಿ ಅಥವಾ ನ್ಯಾಯಾಲಯದ ನ್ಯಾಯಾಧಿಕರಣದ ಅಥವಾ ಇತರ ಪ್ರಾಧಿಕಾರದ ಯಾವುದೇ ಡಿಕ್ರಿಯಲ್ಲಿ ಅಥವಾ ಆದೇಶದಲ್ಲಿ ಇದಕ್ಕೆ ಅಸಂಗತವಾದುದು ಏನೇ ಇದ್ದರೂ ಪರಿಣಾಮಕಾರಿಯಾಗಿರತಕ್ಕದ್ದು.

**12. ತೊಂದರೆಗಳನ್ನು ನಿವಾರಿಸುವ ಅಧಿಕಾರ.–** ಈ ಅಧಿನಿಯಮದ ಉಪಬಂಧಗಳನ್ನು ಕಾರ್ಯಗತಗೊಳಿಸುವಲ್ಲಿ ಯಾವುದೇ ತೊಂದರೆಯು ಉದ್ಭವಿಸಿದರೆ, ಸರ್ಕಾರಿ ರಾಜ್ಯಪತ್ರದಲ್ಲಿ ಪ್ರಕಟಿಸಿದ ಸಾಮಾನ್ಯ ಅಥವಾ ವಿಶೇಷ ಆದೇಶದ ಮೂಲಕ ತೊಂದರೆಯನ್ನು ನಿವಾರಿಸುವ ಉದ್ದೇಶಕ್ಕಾಗಿ ಅವಶ್ಯವೆಂದು ಅಥವಾ ವಿಹಿತವೆಂದು ತನಗೆ ಕಂಡುಬರುವ, ಈ ಅಧಿನಿಯಮದ ಉಪಬಂಧಗಳಿಗೆ ಅಸಂಗತವಾಗಿರದಂಥ ಉಪಬಂಧಗಳನ್ನು ಸರ್ಕಾರವು ರಚಿಸಬಹುದು.

ಪರಂತು, ಈ ಅಧಿನಿಯಮವು ಪ್ರಾರಂಭವಾದಂದಿನಿಂದ ಎರಡು ವರ್ಷಗಳು ಮುಗಿದ ಅನಂತರ ಇಂಥ ಯಾವ ಆದೇಶವನ್ನು ಮಾಡತಕ್ಕದ್ದಲ್ಲ.